ಉದಯಕಾಲ

ಚುಟುಕು ಸುದ್ದಿ

ಕಡೂರು ಪ್ಲೀ ಕಾರ್ಡ್ 50.50 ಲಕ್ಷ ಲಾಭ.ಕೆ.ಎಚ್.ರಂಗನಾಥ್

ಉದಯಕಾಲ ನ್ಯೂಸ್

ಕಡೂರು: ತಾಲ್ಲೂಕಿನ ರೈತರ ಸಹಕಾರದಿಂದ ಕಳೆದ 10 ವರ್ಷವು ಲಾಭದತ್ತ ಸಾಗುತ್ತಿರುವ ರೈತಸ್ನೇಹಿ ಬ್ಯಾಂಕಿಗೆ ಪ್ರಸಕ್ತ ವರ್ಷದಲ್ಲಿ 50.50 ಲಕ್ಷ ನಿವ್ವಳ ಲಾಭ ಗಳಿಸಲಾಗಿದೆ ಎಂದು ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆ.ಎಚ್. ರಂಗನಾಥ್ ತಿಳಿಸಿದರು.

ಪಟ್ಟಣದ ಪಿಕಾರ್ಡ್ ಬ್ಯಾಂಕ್ ಸಭಾಂಗಣದಲ್ಲಿ ಸೋಮವಾರ ನಡೆದ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, 4310 ಜನ ಷೇರುದಾರ ಸದಸ್ಯರನ್ನು ಹೊಂದಿರುವ ಬ್ಯಾಂಕಿನಲ್ಲಿ ಶೇ.53.70 ರಷ್ಟು ಸಾಲ ವಸೂಲಾತಿ ಪ್ರಕ್ರಿಯೆ ನಡೆಸಲಾಗಿದೆ. ಜೊತೆಗೆ ಶೇ.82.93ರಷ್ಟು ಚಾಲ್ತಿ ಸಾಲ ವಸೂಲಾತಿಯಲ್ಲಿ ಪ್ರಗತಿ ಸಾಧಿಸಲಾಗಿದ್ದು, ಮುಖ್ಯವಾಗಿ ರೈತರು ಪಡೆದ ಸಾಲವನ್ನು ನಿಗದಿ ಅವಧಿಯಲ್ಲಿ ಪಾವತಿಸಿದರೆ ಹೆಚ್ಚು ಸಾಲ ವಿತರಣೆಗೆ ಕ್ರಮವಹಿಸಲಾಗುತ್ತದೆ. ತಾಲ್ಲೂಕಿನಲ್ಲಿ ಮಳೆಯ ಕೊರತೆಯನ್ನು ಎದುರಿಸಲಾಗುತ್ತಿದೆ. ಈ ನಡುವೆ ಸಾಲ ವಿತರಣೆಗೆ ಅಗತ್ಯ ಕ್ರಮದೊಂದಿಗೆ ಷೇರುದಾರರ ಹಿತಕ್ಕಾಗಿ 30 ಕೋಟಿಯಷ್ಟು ಸಾಲ ವಿತರಣೆ ಮಾಡುವ ಗುರಿ ಹೊಂದಲಾಗಿದೆ ಎಂದರು.

2025–26ನೇ ಸಾಲಿನಲ್ಲಿ ನಬಾರ್ಡ್ ಯೋಜನೆಯಿಂದ 165 ಜನರಿಗೆ 3.43 ಕೋಟಿ ಸಾಲನೀಡಲಾಗಿದೆ. ಸಾಲ ವಸೂಲಾತಿಯಲ್ಲಿಯೂ ಒಂದಷ್ಟು ಬಿಗಿಯಾದ ಕ್ರಮಗಳನ್ನು ಅನುಸರಿಸುವುದು ಅನಿವಾರ್ಯವಾಗಿದೆ. ಬ್ಯಾಂಕಿನ ಬೆಳವಣಿಗೆಗಾಗಿ ವಸೂಲಾತಿಯು ಅತಿಮುಖ್ಯವಾಗಲಿದ್ದು, ಈಗಾಗಲೇ 337 ಸುಸ್ತಿದಾರರ ಮೇಲೆ ಕಾನೂನು ಕ್ರಮ ಕೈಗೊಂಡಿರುವುದು ವಿಷಾಧಕರ ಸಂಗತಿ. ರೈತರು ಸಕಾಲಕ್ಕೆ ಸಾಲ ಮರುಪಾವತಿ ಮಾಡುವಂತೆ ಮನವರಿಕೆ ಮಾಡಿಕೊಡಲಾಗುತ್ತಿದೆ ಎಂದರು.

ನಿರ್ದೇಶಕ ಜಿಗಣೇಹಳ್ಳಿ ನೀಲಕಂಠಪ್ಪ ಮಾತನಾಡಿ, ಅನೇಕ ಹಿರಿಯರ ಪರಿಶ್ರಮದಿಂದ ಸಂಘವು ತನ್ನದೇ ಆದ ಅಸ್ಥಿತ್ವವನ್ನು ಉಳಿಸಿಕೊಂಡು ರೈತರಿಗಾಗಿ ಆಡಳಿತ ಮಂಡಳಿಯು ಶ್ರಮಿಸುತ್ತಿದೆ. ಜೊತೆಗೆ ಎ ಗ್ರೇಡ್ ಪಡೆದಿರುವ ಬ್ಯಾಂಕ್‌ನ್ನು ರೈತರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಡುವ ಮೂಲಕ ಮತ್ತಷ್ಟು ಪ್ರಗತಿಯತ್ತ ಬೆಳೆಸಲು ರೈತರ ಸಹಕಾರ ಪ್ರಮುಖ ಪಾತ್ರವಹಿಸಲಿದೆ ಎಂದರು.

ಈ ಸಂದರ್ಭದಲ್ಲಿ ಬ್ಯಾಂಕಿನ ವ್ಯವಸ್ಥಾಪಕ ಶಿವಾಜಿ ಲಮಾಣಿ ವಾರ್ಷಿಕ ವರದಿಯನ್ನು ಮಂಡಿಸಿದರು. ಉಪಾಧ್ಯಕ್ಷೆ ಸಿ.ಈ. ರುದ್ರಮ್ಮ, ನಿರ್ದೇಶಕರಾದ ಎಚ್.ಎಂ. ರೇವಣ್ಣಯ್ಯ, ಸಾಣೇಹಳ್ಳಿ ವಿರೂಪಾಕ್ಷಪ್ಪ, ಮೋಹನ್‌ನಾಯ್ಕ್, ತಿಮ್ಮೇಗೌಡರು, ಎಚ್.ಪಿ.ಚನ್ನಮಲ್ಲಪ್ಪ, ಸುನಂದಮ್ಮ, ಬಿ.ಎಸ್. ತಿಪ್ಪೇಶಪ್ಪ, ಆನಂದನಾಯ್ಕ್, ಎಂ.ಪ್ರಕಾಶ್‌ನಾಯ್ಕ್, ಪಿ.ಸಿ.ಸಂತೋಷ್, ಕೆ.ಆರ್.ಸಂಜಯ್, ಕೆ.ಎಸ್. ಕೃಷ್ಣನಾಯ್ಕ್, ಬ್ಯಾಂಕ್ ಪ್ರತಿನಿಧಿ ಪುಟ್ಟರಾಜು ಹಾಗೂ ಸಿಬ್ಬಂದಿಗಳು ಇದ್ದರು.

ವಿಜೃಂಭಣೆಯ ಓಂ ಗಣಪತಿ ರಾಜಬೀದಿ ಉತ್ಸವ

ಮೆರವಣಿಗೆಗೆ ವಿವಿಧ ಕಲಾ ತಂಡಗಳಿಂದ ಮೆರಗು; ನೂರಾರು ಜನರು ಭಾಗಿ

ಉದಯಕಾಲ ನ್ಯೂಸ್

ಹೊಸದುರ್ಗ: ಪಟ್ಟಣದ ಅಶೋಕ ರಂಗಮಂದಿರದಲ್ಲಿ ಓಂ ಗಣಪತಿ ಸೇವಾ ಸಮಿತಿ ವತಿಯಿಂದ ಪ್ರತಿಷ್ಠಾಪಿಸಲಾಗಿದ್ದ 23ನೇ ವರ್ಷದ ಓಂ ಗಣಪತಿ ಮಹೋತ್ಸವವು ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ಗಣೇಶೋತ್ಸವದ ಅಂಗವಾಗಿ ಒಂಬತ್ತು ದಿನಗಳ ಕಾಲ ವಿವಿಧ ಪೂಜಾ ಕೈಂಕರ್ಯಗಳು, ಸಾಂಸ್ಕೃತಿಕ ಹಾಗೂ ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಪ್ರತಿದಿನವೂ ವಿಶೇಷ ಪೂಜೆ, ಭಜನೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿ, ಭಕ್ತರನ್ನು ಆಕರ್ಷಿಸಿದವು.

ಮಹೋತ್ಸವದ ಅಂಗವಾಗಿ ಸೋಮವಾರ ಗಣಹೋಮ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಿತು. ಗಣಹೋಮದಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ವಿಘ್ನನಿವಾರಕ ಗಣಪತಿಗೆ ವಿಶೇಷ ಪೂಜೆ ಸಲ್ಲಿಸಿ, ನಾಡಿನ ಸುಭಿಕ್ಷೆ, ಮಳೆ–ಬೆಳೆ ಹಾಗೂ ಸರ್ವರಿಗೂ ಒಳಿತಾಗಲಿ ಎಂದು ಪ್ರಾರ್ಥಿಸಿದರು. ಬಳಿಕ ನಡೆದ ಅನ್ನಸಂತರ್ಪಣೆಯಲ್ಲಿ ನೂರಾರು ಭಕ್ತರು ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು.

ಗಣೇಶೋತ್ಸವದ ಸಮಾರೋಪದ ಅಂಗವಾಗಿ ಮಂಗಳವಾರ ಓಂ ಗಣಪತಿ ಸ್ವಾಮಿಯವರ ರಾಜಬೀದಿ ಉತ್ಸವವನ್ನು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಅತ್ಯಂತ ಸಂಭ್ರಮ ಹಾಗೂ ಸಡಗರದಿಂದ ನಡೆಸಲಾಯಿತು. ವಿಶೇಷವಾಗಿ ಅಲಂಕರಿಸಲಾದ ವಾಹನದಲ್ಲಿ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸಿ ಮೆರವಣಿಗೆ ನಡೆಸಲಾಯಿತು. ಮೆರವಣಿಗೆ ಸಾಗಿದ ಪ್ರಮುಖ ರಸ್ತೆಗಳಲ್ಲಿ ಭಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿ ಗಣಪತಿಯ ದರ್ಶನ ಪಡೆದು ಪೂಜೆ ಸಲ್ಲಿಸಿದರು. ಮಹಿಳೆಯರು, ಮಕ್ಕಳು ಸೇರಿದಂತೆ ನೂರಾರು ಭಕ್ತರು ಮೆರವಣಿಗೆಯಲ್ಲಿ ಪಾಲ್ಗೊಂಡು ಭಕ್ತಿಭಾವ ಮೆರೆದರು.

ಚಂಡೆ ವಾದ್ಯ, ವೀರಗಾಸೆ, ಮಂಗಳವಾದ್ಯ, ಗೊಂಬೆಗಳ ಕುಣಿತ ಸೇರಿದಂತೆ ವಿವಿಧ ಕಲಾತಂಡಗಳು ಮೆರವಣಿಗೆಗೆ ವಿಶೇಷ ಮೆರುಗು ನೀಡಿದವು. ಚಂಡೆಯ ನಾದಕ್ಕೆ ಕಲಾವಿದರು ಪ್ರದರ್ಶಿಸಿದ ವೀರಗಾಸೆ ಹಾಗೂ ಗೊಂಬೆಗಳ ಕುಣಿತ ಸಾರ್ವಜನಿಕರ ಗಮನ ಸೆಳೆಯಿತು. ದಾರಿಯುದ್ದಕ್ಕೂ ಭಕ್ತರು ಗಣಪತಿ ನಾಮಸ್ಮರಣೆ, ಜಯಘೋಷ ಹಾಗೂ ಭಕ್ತಿಗೀತೆಗಳ ಮೂಲಕ ಸಂಭ್ರಮಿಸಿದರು. ಮೆರವಣಿಗೆಯ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಆಯೋಜಕರು ಹಾಗೂ ಸಂಬಂಧಪಟ್ಟವರು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದರು. ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಹಬ್ಬದ ವಾತಾವರಣ ನಿರ್ಮಾಣಗೊಂಡಿದ್ದು, ಗಣೇಶೋತ್ಸವದ ಸಂಭ್ರಮ ಕಳೆಗಟ್ಟಿತ್ತು.

ರಾಜಬೀದಿ ಉತ್ಸವದ ಬಳಿಕ ಓಂ ಗಣಪತಿ ಸ್ವಾಮಿಯವರ ಮೂರ್ತಿಯನ್ನು ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಸಮೀಪದಲ್ಲಿರುವ ಮಠದ ಬಾವಿಗೆ ಕೊಂಡೊಯ್ಯಲಾಯಿತು. ಅಲ್ಲಿ ಧಾರ್ಮಿಕ ವಿಧಿವಿಧಾನಗಳೊಂದಿಗೆ ಗಣಪತಿ ಮೂರ್ತಿಯ ವಿಸರ್ಜನೆ ನೆರವೇರಿಸಲಾಯಿತು. ಒಂಬತ್ತು ದಿನಗಳ ಕಾಲ ಭಕ್ತಿಭಾವದಿಂದ ನಡೆದ 23ನೇ ವರ್ಷದ ಓಂ ಗಣಪತಿ ಮಹೋತ್ಸವವು ಧಾರ್ಮಿಕ ಶ್ರದ್ದೆ, ಸಾಂಸ್ಕೃತಿಕ ವೈಭವ ಹಾಗೂ ಭಕ್ತರ ಒಗ್ಗಟ್ಟಿನೊಂದಿಗೆ ಯಶಸ್ವಿಯಾಗಿ ಸಂಪನ್ನಗೊಂಡಿತು.

ಭದ್ರೆಗಾಗಿ ಕ್ಯಾದಿಗೆರೆ, ಜೆ.ಎನ್.ಕೋಟೆ ರೈತರ ಹಕ್ಕೊತ್ತಾಯ

ನೀರಾವರಿ ಅನುಷ್ಠಾನ ಹೋರಾಟ ಸಮಿತಿ ಸಾಥ್. ಮುಖ್ಯ ಇಂಜಿನಿಯರ್ ಜೊತೆ ಮಾತುಕತೆ

ಉದಯಕಾಲ ನ್ಯೂಸ್

ಚಿತ್ರದುರ್ಗ: ಭದ್ರಾ ಮೇಲ್ದಂಡೆ ಯೋಜನೆಯಡಿ ನಮ್ಮೂರ ಕೆರೆಗಳಿಗೂ ನೀರು ಪೂರೈಕೆ ಮಾಡುವಂತೆ ಆಗ್ರಹಿಸಿ ಕ್ಯಾದಿಗೆರೆ ಹಾಗೂ ಜೆ.ಎನ್.ಕೋಟೆ ರೈತರು ಮಂಗಳವಾರ ಮುಖ್ಯ ಇಂಜಿನಿಯರ್ ಕಚೇರಿಗೆ ಧಾವಿಸಿ ಹಕ್ಕೊತ್ತಾಯ ಮಂಡಿಸಿದರು.

ನೀರಾವರಿ ಅನುಷ್ಠಾನ ಹೋರಾಟ ಸಮಿತಿ ಕಾರ್ಯಾಧ್ಯಕ್ಷ ಬಿ.ಎ.ಲಿಂಗಾರೆಡ್ಡಿ ಹಾಗೂ ಪ್ರಧಾನ ಸಂಚಾಲಕ ಚಿಕ್ಕಪ್ಪನಹಳ್ಳಿ ಷಣ್ಮುಖ ನೇತೃತ್ವದಲ್ಲಿ ಕಚೇರಿಗೆ ಆಗಮಿಸಿದ ಮುನ್ನೂರಕ್ಕ ಹೆಚ್ಚು ರೈತರು ಪ್ರಾಯೋಗಿಕ ಪರೀಕ್ಷಾರ್ಥ ವೇಳೆಯೇ ನಮ್ಮೂರ ಕೆರೆಗಳಿಗೆ ನೀರು ಹಾಯಿಸಬೇಕು. ತಕ್ಷಣವೇ ಮಾರ್ಗಗಳ ಹುಡುಕಬೇಕೆಂದು ಒತ್ತಾಯಿಸಿದರು.

ಕ್ಯಾದಿಗೆರೆ ಗ್ರಾಮದ ಹೆದ್ದಾರಿ ಪಕ್ಕದಲ್ಲಿ ಆಳವಾದ ಗುಂಡಿಯಿದ್ದು ಮಳೆಗಾಲದಲ್ಲಿ ಇದು ಸದಾ ತುಂಬಿರುತ್ತಿತ್ತು. ಇದರಿಂದಾಗಿ ಸುತ್ತ ಮುತ್ತಲ ಜಮೀನುಗಳ ಅಂತರ್ಜಲ ಹೆಚ್ಚಳವಾಗಿ ರೈತರು ನೆಮ್ಮದಿಯಿಂದ ಇದ್ದರು. ಆದರೆ ಇತ್ತೀಚೆಗಿನ ದಿನಗಳಲ್ಲಿ ಮಳೆ ಬಾರದೆ ಗುಂಡಿಯಲ್ಲಿ ನೀರು ನಿಲ್ಲದೆ ತೊಂದರೆಯಾಗಿದೆ. ಅನತಿ ದೂರದಲ್ಲಿ ಭದ್ರಾ ಮೇಲ್ದಂಡೆ ಚಿತ್ರದುರ್ಗ ಶಾಖಾ ಕಾಲುವೆ ಹಾದು ಹೋಗಿದ್ದು ಅಲ್ಲಿಂದ ನೀರು ಹಾಯಿಸಿ ಇಲ್ಲಿನ ಗುಂಡಿ ತುಂಬಿಸಬಹುದಾಗಿದೆ. ನಾವು ನೂರಾರು ಕೋಟಿ ರೂಪಾಯಿ ವೆಚ್ಚದ ಯೋಜನೆ ಕೇಳುತ್ತಿಲ್ಲ. ಕೆಲವು ಲಕ್ಷ ರು ವೆಚ್ಚದಲ್ಲಿ ಹೆದ್ದಾರಿ ಪಕ್ಕದ ಗುಂಡಿ ತುಂಬಿಸಬಹುದಾಗಿದೆ. ಸಣ್ಣ ಪುಟ್ಟ ಆಸೆಗಳ ಈಡೇರಿಸುವುದು ಸರ್ಕಾರ ಹಾಗೂ ಅಧಿಕಾರಿಗಳ ಕರ್ತವ್ಯವೆಂದರು.

ಜೆ.ಎನ್. ಕೋಟೆ ಕೆರೆಗೆ ಭದ್ರೆ ನೀರು ಲಿಂಕ್ ಇದ್ದರೂ ಹರಿದು ಬರುತ್ತಿಲ್ಲ. ಗ್ರಾಮಸ್ಥರೇ ಜೆಸಿಬಿ ಯಂತ್ರದ ಸಹಾಯದಿಂದ ಕಾಲುವೆ ತೋಡಿದ್ದಾರೆ. ಅಧಿಕಾರಿಗಳು ನೀರು ಪೂರೈಕೆಗೆ ಕ್ರಮ ಕೈಗೊಳ್ಳಬೇಕು. ಇದೂ ಕೂಡಾ ಸರ್ಕಾರಕ್ಕೆ ಅಧಿಕ ವೆಚ್ಚವಾಗುವುದಿಲ್ಲವೆಂದು ರೈತರು ಮನವಿ ಮಾಡಿದರು.

ಈ ವೇಳೆ ಮಾತನಾಡಿದ ನೀರಾವರಿ ಅನುಷ್ಠಾನ ಹೋರಾಟ ಸಮಿತಿ ಕಾರ್ಯಾಧ್ಯಕ್ಷ ಬಿ.ಎ.ಲಿಂಗಾರೆಡ್ಡಿ, 30 ವರ್ಷಗಳಿಂದೆ ಜಿಲ್ಲೆಯ ಜನ ಸಮುದಾಯಗಳು ಹೋರಾಟ ಮಾಡಿ ನೀರು ತಂದಿದ್ದಾರೆ. ತಮ್ಮೂರ ಪಕ್ಕದಲ್ಲಿ ನೀರು ಹರಿದು ಹೋಗುವುದ ಆಸೆ ಕಣ್ಣಿಂದ ನೋಡಿ ಸಂತಸ ಪಟ್ಟಿದ್ದಾರೆ. ಆದರೆ ನಮಗೆ ನೀರು ಇಲ್ಲವೆಂಬ ಕೊರಗು ಅವರದ್ದಾಗಿದೆ. ಶಾಖಾ ಕಾಲುವೆ ಸಮೀಪದ ಹಳ್ಳಗಳಿಗೆ ಭದ್ರೆ ನೀರು ಹರಿಯುವಂತೆ ಮಾಡಿದರೆ ಅಂತರ್ಜಲ ಹೆಚ್ಚಳವಾಗುತ್ತದೆ. ಹಾಗಾಗಿ ಅಧಿಕಾರಿಗಳು ಕಾರ್ಯಸಾಧ್ಯತೆ ಬಗ್ಗೆ ಗಂಭೀರವಾಗಿ ದೃಷ್ಟಿ ಹಾಯಿಸಬೇಕೆಂದು ಮನವಿ ಮಾಡಿದರು.

ಮನವಿ ಆಲಿಸಿದ ಮುಖ್ಯ ಇಂಜಿನಿಯರ್ ರವಿಶಂಕರ್ ಮಾತನಾಡಿ, ಸೆಪ್ಟಂಬರ್ 24 ಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಿತ್ರದುರ್ಗಕ್ಕೆ ಆಗಮಿಸಿ ಗೋನೂರು ಕೆರೆಗೆ ಪೂಜೆ ಸಲ್ಲಿಸಲಿದ್ದಾರೆ. ಅವರು ಬಂದು ಹೋದ ನಂತರ ಇಲಾಖೆಯ ಇಂಜಿನಿಯರ್ ತಂಡದೊಂದಿಗೆ ನಾನೇ ಸ್ಥಳಕ್ಕೆ ಖುದ್ದು ಆಗಮಿಸಿ ಜೆ.ಎನ್.ಕೋಟೆ ಹಾಗೂ ಕ್ಯಾದಿಗೆರೆ ಗೆ ನೀರು ಹರಿಸುವುದರ ಕುರಿತು ಪರಿಶೀಲಿಸುವೆ ಎಂದರು.

ಭದ್ರಾ ಜಲಾಶಯದಿಂದ ಚಿತ್ರದುರ್ಗ ಶಾಖಾ ಕಾಲುವೆಗೆ ನೀರು ಹಾಯಿಸಲು ಮೂರು ಟಿಎಂಸಿ ಹಂಚಿಕೆ ಮಾಡಿ ಸರ್ಕಾರ ಆದೇಶಿಸಿದೆ. ಇದುವರೆಗೂ ಒಂದು ಟಿಎಂಸಿ ಯಷ್ಟು ನೀರನ್ನು ಮಾತ್ರ ಲಿಪ್ಟ್ ಮಾಡಿ ಕಾಲುವೆಗೆ ಹರಿಸಲಾಗಿದೆ. ಇನ್ನೂ ಎರಡು ಟಿಎಂಸಿ ಬಾಕಿ ಇದೆ. ರೈತರು ಆತಂಕ ಪಡುವ ಅಗತ್ಯವಿಲ್ಲ ಎಂದರು.

ನೀರಾವರಿ ಅನುಷ್ಠಾನ ಹೋರಾಟ ಸಮಿತಿ ಪ್ರಧಾನ ಸಂಚಾಲಕ ಚಿಕ್ಕಪ್ಪನಹಳ್ಳಿ ಷಣ್ಮುಖ ಮಾತನಾಡಿ, ಅಧಿಕಾರಿಗಳು ಹಾಗೂ ರೈತರು ಕಾಲುವೆ ಸಮೀಪ ಕುಳಿತು ನೀರು ಹರಿಸುವ ಸಾಧ್ಯತೆ ಬಗ್ಗೆ ಚರ್ಚಿಸೋಣ. ಗ್ರಾವಿಟಿ ಲೆವೆಲ್‌ನಲ್ಲಿ ನೀರು ಹರಿಯುವುದಿದ್ದರೆ ತಕ್ಷಣ ತೀರ್ಮಾನ ಕೈಗೊಳ್ಳಬೇಕು. ಎಲ್ಲವೂ ಸರ್ಕಾರದ ಮಟ್ಟದಲ್ಲಿ ಆಗಬೇಕು ಎಂದೇನಿಲ್ಲ. ಆದರೆ ರೈತರು ಕಾನೂನು ಮೀರಿ ನಡೆದುಕೊಳ್ಳಬಾರದು. ಕಾಲುವೆಗೆ ಹಾನಿ ಮಾಡುವಂತಹ ದೃಷ್ಕೃತ್ಯಗಳ ನಡೆಸಬಾರದೆಂದು ವಿನಂತಿಸಿದರು.

ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿ ಕೇವಲ ಅರ್ಧದಷ್ಟು ಮಾತ್ರ ಮುಗಿದಿದೆ. ಪೂರ್ಣ ಪ್ರಮಾಣದ ಅನುಷ್ಠಾನಕ್ಕಾಗಿ ಮತ್ತಷ್ಟು ಹೋರಾಟದ ಹಾದಿ ಸವೆಸಬೇಕಿದೆ. ಚಾಕೋಲೇಟ್, ಸಿಹಿ ಹಂಚಿ ಸಂಭ್ರಮಿಸುವಂತಹ ವಾತಾವರಣ ಇನ್ನೂ ಸೃಷ್ಟಿಯಾಗಿಲ್ಲ, ಜಗಳೂರು, ಮೊಳಕಾಲ್ಮೂರು, ಚಳ್ಳಕೆರೆಗೆ ನೀರು ಹಾಯಿಸಬೇಕಿದೆ. ಸಿಹಿ ಹಂಚಿ ಮೈಮರೆತರೆ ಸರ್ಕಾರ, ಅಧಿಕಾರಿಗಳು ಎಚ್ಚರ ತಪ್ಪುವ ಸಾಧ್ಯತೆ ಇರುತ್ತದೆ ಎಂದರು.

ಕ್ಯಾದಿಗೆರೆಯ ಗ್ರಾಪಂ ಸದಸ್ಯ ಮಂಜುನಾಥ್, ಸತೀಶ್, ಸೀತಾರೆಡ್ಡಿ, ಹೂವಿನ ಕಲ್ಲೇಶಿ, ಮಾರ್ಕಂಡಪ್ಪ, ಬಸವರಾಜಪ್ಪ, ದೇವರಾಜು,ಹಟ್ಟಿ ತಿಪ್ಪೇಸ್ವಾಮಿ, ರಾಜಪ್ಪ, ರಾಮಣ್ಣ, ಜೆ.ಎನ್.ಕೋಟೆ ತಾಪಂ ಮಾಜಿ ಸದಸ್ಯ ಮಂಜುನಾಥ್, ಸಿದ್ದೇಶ್ ನಾಯಕ, ಪ್ರಸನ್ನ ಕುಮಾರ್, ಸಿರಿಗಿ ನಿಂಗಪ್ಪ ಈ ವೇಳೆ ಉಪಸ್ಥಿತರಿದ್ದರು.

ಉಚಿತ ಕುರಿ ಸಾಕಾಣಿಕೆ ತರಬೇತಿ ಶಿಬಿರ

ಉದಯಕಾಲ ನ್ಯೂಸ್

ಚಿಕ್ಕಮಗಳೂರು: ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕು ಸೊಣ್ಣಹಳ್ಳಿಪುರದಲ್ಲಿರುವ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ಅಕ್ಟೋಬರ್ 7 ರಿಂದ 13 ದಿನಗಳ ಕಾಲ ನಿರುದ್ಯೋಗಿ ಪುರುಷರು ಹಾಗೂ ಮಹಿಳೆಯರಿಗೆ ಉಚಿತ ಕುರಿ ಸಾಕಾಣಿಕೆ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರದಲ್ಲಿ ಕುರಿ ಸಾಕಾಣಿಕೆ ಜೊತೆಗೆ ವೈಜ್ಞಾನಿಕ ರೀತಿಯಲ್ಲಿ ಹಸು ಸಾಕಾಣಿಕೆ, ಮೇಕೆ ಸಾಕಾಣಿಕೆ, ಹಂದಿ ಸಾಕಾಣಿಕೆ, ಕೋಳಿ ಸಾಕಾಣಿಕೆ, ತೋಟಗಾರಿಕಾ ಬೆಳೆಗಳು, ಸಾವಯವ ಗೊಬ್ಬರ ತಯಾರಿಕೆ ಬಗ್ಗೆ ತರಬೇತಿ ನೀಡಲಾಗುವುದು.

ಸ್ವಯಂ ಉದ್ಯೋಗಿಗಳಾಗಲು ಬಯಸುವ 18 ರಿಂದ 49 ವರ್ಷ ವಯಸ್ಸಿನ ಕರ್ನಾಟಕ ರಾಜ್ಯದ ಯಾವುದೇ ಜಿಲ್ಲೆಯ ನಿರುದ್ಯೋಗಿ ಪುರುಷರು ಹಾಗೂ ಮಹಿಳೆಯರು ಈ ಶಿಬಿರದಲ್ಲಿ ಪಾಲ್ಗೊಳ್ಳಬಹುದು ಈ ಶಿಬಿರದ ಸಮಯದಲ್ಲಿ ತರಬೇತಿ, ಊಟ ಹಾಗೂ ವಸತಿ ಸೌಕರ್ಯಗಳನ್ನು ಶಿಬಿರಾರ್ಥಿಗಳಿಗೆ ಉಚಿತವಾಗಿ ಕಲ್ಪಿಸಲಾಗುವುದು. ಗ್ರಾಮೀಣ ಭಾಗದ ಬಿಪಿಎಲ್ ಅಭ್ಯರ್ಥಿಗಳಿಗೆ ಮೊದಲ ಆದ್ಯತೆಯನ್ನು ನೀಡಲಾಗುವುದು. ಅಭ್ಯರ್ಥಿಗಳು ಸ್ಥಳೀಯ ಭಾಷೆ ಬಲ್ಲವರಾಗಿದ್ದು, ಕನ್ನಡ ಓದಲು ಮತ್ತು ಬರೆಯಲು ತಿಳಿದಿರಬೇಕು. ತರಬೇತಿ ನಂತರ ಕೇಂದ್ರ ಸರ್ಕಾರದ ಗ್ರಾಮೀಣ ಸಚಿವಾಲಯದಿಂದ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.

ಆಸಕ್ತರು ಅಂದು ಬೆಳಿಗ್ಗೆ 10 ಗಂಟೆಗೆ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಹಸಿಗಾಳ(ಅಂಚೆ), ಸೊಣ್ಣಹಳ್ಳಿಪುರದಲ್ಲಿ ನಡೆಯುವ ತರಬೇತಿಗೆ ನೇರವಾಗಿ ವಿದ್ಯಾರ್ಹತೆ ಮತ್ತು ವಿಳಾಸ ದಾಖಲಾತಿಗಳೊಂದಿಗೆ ಹಾಜರಾಗಬೇಕಾಗಿ ಈ ಮೂಲಕ ಸೂಚಿಸಲಾಗಿದೆ. ಸಂದರ್ಶನಕ್ಕೆ ಹಾಜರಾಗಲು ಅಸಾಧ್ಯವಾದಲ್ಲಿ ಅಕ್ಟೋಬರ್ 7 ರೊಳಗೆ ಸಂಸ್ಥೆಯನ್ನು ದೂರವಾಣಿ (8970476050, 6363139123, 9886935603, 9591514154, 9686ಸ248369) ಮೂಲಕ ಸಂಪರ್ಕಿಸಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬಹುದೆಂದು ಸಂಸ್ಥೆಯ ನಿರ್ದೇಶಕರು ತಿಳಿಸಿದ್ದಾರೆ.

ಸೆ.25: ಕೈಗಾರಿಕಾ ಸ್ಪಂದನ ಸಭೆ

ಚಿಕ್ಕಮಗಳೂರು: ಕೈಂಗಾರಿಕಾ ಸ್ಪಂದನ ಸಭೆಯನ್ನು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳಾದ ಭಂವರ್ ಸಿಂಗ್ ಮೀನಾ ಅವರ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್ 25 ರಂದು ಸಂಜೆ 5 ಗಂಟೆಗೆ ಆಯೋಜಿಸಲಾಗಿದೆ. ಕೈಗಾರಿಕೋದ್ಯಮಿಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮನವಿ, ಅಹವಾಲುಗಳು ಇದ್ದಲ್ಲಿ ಜಿಲ್ಲೆಯ ಕೈಗಾರಿಕೋದ್ಯಮಿಗಳು ಸೆಪ್ಟೆಂಬರ್ 24 ರೊಳಗೆ ನಗರದ ಜಿಲ್ಲಾ ಕೈಗಾರಿಕಾ ಕೇಂದ್ರದ ಕಚೇರಿಗೆ ಲಿಖಿತ ರೂಪದಲ್ಲಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಜಿಲ್ಲಾ ಕೈಗಾರಿಕಾ ಕೇಂದ್ರವನ್ನು (ದೂರವಾಣಿ ಸಂಖ್ಯೆ: 08262–295821) ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕ ಸೂಚನೆ

ಇಲ್ಲಿ ಕೆಳಗೆ ಉಲ್ಲೇಖಿಸಿರುವ ವಿಷಯವು, ಅಂದರೆ ಮಧ್ಯಸ್ಥಿಕೆ ಮತ್ತು ಸಂಧಾನ ಕಾಯ್ದೆ, 1996ರ ಸೆಕ್ಷನ್ 9ರ ಅಡಿಯಲ್ಲಿ ಸಲ್ಲಿಸಲಾದ ಮಧ್ಯಸ್ಥಿಕೆ ಅರ್ಜಿ, ಮಾನ್ಯ ಬಾಂಬೆ ಉಚ್ಚ ನ್ಯಾಯಾಲಯದಲ್ಲಿ (ಪೀಠಾಸೀನ ನ್ಯಾಯಮೂರ್ತಿ: ಅಮಿತ್ ಬೋರ್ಕರ್ ಜೆ) ವಿಚಾರಣೆಯಲ್ಲಿದೆ.

ಬಾಂಬೆ ಉಚ್ಚ ನ್ಯಾಯಾಲಯದಲ್ಲಿ
ಸಾಮಾನ್ಯ ಮೂಲ ಸಿವಿಲ್ ನ್ಯಾಯವ್ಯಾಪ್ತಿ
ವಾಣಿಜ್ಯ ಮಧ್ಯಸ್ಥಿಕೆ ಅರ್ಜಿ ಸಂಖ್ಯೆ 290/2026

ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್ ... ಅರ್ಜಿದಾರರು

/ ವಿರುದ್ಧ /

ಬನಶಂಕರಿ ಟ್ರೇಡರ್ಸ್
ನಾಗೇಶ್ ಎನ್ ಎಸ್ (ಮಾಲೀಕರು) ... ಪ್ರತಿವಾದಿಗಳು

ಇವರಿಗೆ,

1) 1) ಬನಶಂಕರಿ ಟ್ರೇಡರ್ಸ್ ಇದರ ಮಾಲೀಕ ನಾಗೇಶ್ ಎನ್ ಎಸ್ ಅವರ ಮೂಲಕ; ವಿಳಾಸ: ಮನೆ ನಂ.1, ಜಿ ಬ್ಲಾಕ್, ಎಪಿಎಂಸಿ ಅಂಗಳ, 4ನೇ ವಿಭಾಗ ಸೀಗೆಬಾಗಿ, ಬಡಾವಣೆ, ಭದ್ರಾವತಿ, ಶಿವಮೊಗ್ಗ, ಕರ್ನಾಟಕ– 577301.
ಇ–ಮೇಲ್: BANASHANKARI@GMAIL.COM
ಮೊಬೈಲ್ ಸಂಖ್ಯೆ: 9686850913

2. ನಾಗೇಶ್ ಎನ್ ಎಸ್, ಮನೆ– ಬಿನ್ ಎಸ್ ಎಸ್ ನಟರಾಜು ಹುಚ್ಚನಹಟ್ಟಿ, ಹಳೇಪಾಳ್ಯ ಅಂಚೆ, ತಿಪಟೂರು, (ಗ್ರಾಮೀಣ), ಕೋಟನಾಯಕನಹಳ್ಳಿ, ತುಮಕೂರು, ಕರ್ನಾಟಕ

... ಪ್ರತಿವಾದಿಗಳು

ಮತ್ತು, 16–09–2026 ರಂದು ನೀಡಲಾದ ಆದೇಶದ ಮೂಲಕ, ಮಾನ್ಯ ನ್ಯಾಯಮೂರ್ತಿಗಳು ಪ್ರತಿವಾದಿ(ಗಳ)ಗೆ ಬದಲಿ ಸೇವೆಯ ಮೂಲಕ ಪತ್ರಿಕಾ ಪ್ರಕಟಣೆಯ ಮೂಲಕ ನೋಟಿಸ್ ಜಾರಿಗೊಳಿಸುವಂತೆ ಆದೇಶಿಸಲು ದಯಪಾಲಿಸಿದ್ದಾರೆ.

ಅದರಂತೆ, **ಪ್ರತಿವಾದಿ ಸಂಖ್ಯೆ 1 ಮತ್ತು 2 ರವರಿಗೆ** ಮೇಲ್ಕಂಡ ಆದೇಶವನ್ನು ಗಮನಿಸಿ, **2026ರ ಅಕ್ಟೋಬರ್ 14 ರಂದು,** ಮೇಲ್ಕಂಡ ವಿಷಯದಲ್ಲಿ ಮಾನ್ಯ **ನ್ಯಾಯಮೂರ್ತಿ ಅಮಿತ್ ಬೋರ್ಕರ್ ಜೆ** ಅವರ ಮುಂದೆ ವೈಯಕ್ತಿಕವಾಗಿ ಅಥವಾ ಬಾಂಬೆ ಉಚ್ಚ ನ್ಯಾಯಾಲಯದ ಮೂಲ ವಿಭಾಗದಲ್ಲಿ ವಕಾಲತ್ತು ನಡೆಸಲು ಅರ್ಹರಾಗಿರುವ ವಕೀಲರ ಮೂಲಕ ಹಾಜರಾಗುವಂತೆ / ವಿಚಾರಣೆಗೆ ಹಾಜರಾಗುವಂತೆ ಈ ಮೂಲಕ ತಿಳಿಸಲಾಗುತ್ತದೆ ಮತ್ತು ಕರೆಯಲಾಗುತ್ತದೆ. ಹಾಗೆಯೇ, ನಂತರ ಈ ವಿಷಯವನ್ನು ಮಾನ್ಯ ನ್ಯಾಯಾಲಯದ ಮುಂದೆ ವಿಚಾರಣೆಗೆ ಪಟ್ಟಿ ಮಾಡಿದಾಗಲೆಲ್ಲಾ ಹಾಜರಾಗಬೇಕಾಗುತ್ತದೆ.

ಪ್ರತಿವಾದಿ(ಗಳು) ಈ ವಿಚಾರಣೆಯ ಪ್ರಕ್ರಿಯೆ ಮತ್ತು **16ನೇ ಸೆಪ್ಟೆಂಬರ್, 2026ರಂದು ನೀಡಲಾದ ಆದೇಶದ ಮೂಲಕ ಕೋರಿಕೆ ಉಪವಾಕ್ಯ (ಬಿ) ಅಡಿಯಲ್ಲಿ ಮಂಜೂರು ಮಾಡಲಾದ ತಾತ್ಕಾಲಿಕ ಮಧ್ಯಂತರ ಪರಿಹಾರದ ಬಗ್ಗೆ ಗಮನಿಸುವಂತೆ ಈ ಮೂಲಕ ಕರೆಯಲಾಗುತ್ತದೆ. ಮೇಲ್ಕಂಡ ಆದೇಶದ ಪ್ರಕಾರ, ಪ್ರತಿವಾದಿ(ಗಳು) ತಮ್ಮ ಎಲ್ಲಾ ಬ್ಯಾಂಕ್ ಖಾತೆಗಳ ವಿವರಗಳು ಹಾಗೂ ತಮ್ಮ ಎಲ್ಲಾ ಚರ ಮತ್ತು ಸ್ಥಿರ ಆಸ್ತಿಗಳು ಮತ್ತು ಸಂಪತ್ತುಗಳ ವಿವರಗಳನ್ನು, ಅವುಗಳ ಮೇಲೆ ಇರುವ ಯಾವುದೇ ಬಾಧ್ಯತೆಗಳು / ಹಕ್ಕುಭಾರಗಳ ವಿವರಗಳೊಂದಿಗೆ, ಪ್ರಮಾಣಪೂರ್ವಕವಾಗಿ ಬಹಿರಂಗಪಡಿಸುವಂತೆ ನಿರ್ದೇಶಿಸಲಾಗಿದೆ.**

ನಿಮ್ಮ ಪರವಾಗಿ ವೈಯಕ್ತಿಕವಾಗಿ ಅಥವಾ ನಿಮ್ಮಿಂದ ಸರಿಯಾಗಿ ಅಧಿಕಾರ ನೀಡಲ್ಪಟ್ಟು ಹಾಗೂ ಸೂಚನೆಗಳನ್ನು ಪಡೆದಿರುವ ಬಾಂಬೆ ಉಚ್ಚ ನ್ಯಾಯಾಲಯದ ವಕೀಲರ ಮೂಲಕ ಯಾವುದೇ ಹಾಜರಾತಿ ಮಾಡದಿದ್ದಲ್ಲಿ, ಮೇಲ್ಕಂಡ ವಿಷಯವನ್ನು ಯಾವುದೇ ಹೆಚ್ಚುವರಿ ಮಾಹಿತಿ ನೀಡದೆ, ನಿಮ್ಮ ಗೈರುಹಾಜರಿಯಲ್ಲಿಯೇ ವಿಚಾರಣೆ ನಡೆಸಿ ನಿರ್ಧರಿಸಬಹುದು ಎಂಬುದನ್ನು ದಯವಿಟ್ಟು ಗಮನಿಸಿ.

16ನೇ ಸೆಪ್ಟೆಂಬರ್, 2026ರಂದು ನೀಡಲಾದ ಆದೇಶದ ಮುಂದುವರಿಕೆ ಹಾಗೂ ಅನುಸರಣೆಯಾಗಿ.

ದಿನಾಂಕ: 23.09.2026
ಸ್ಥಳ: ಶಿವಮೊಗ್ಗ & ತುಮಕೂರು
ಅರ್ಜಿದಾರರು
ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್

(ಈ ಮೊದಲು ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಗ ಹೊಂದಿದೆ)
CIN: L65110TN2014PLC097792, ನೋಂದಾಯಿತ ಕಚೇರಿ : ಕೆಆರ್‌ಎಂ ಅವರ್, 8ನೇ ಮಹಡಿ
ಹ್ಯಾರಿಂಗ್ಟನ್ ರಸ್ತೆ, ಚೆಟ್‌ಪೇಟ್, ಚೆನ್ನೈ–600031. ದೂ: + 9144 4564 4000 ಫ್ಯಾಕ್ಸ್ : +91 444564 4022

IDFC FIRST Bank

ಅಪೆಂಡಿಕ್ಸ್ IV [ನಿಯಮ 8(1) ಸ್ವಾಧೀನತೆಯ ಪ್ರಕಟಣೆ (ಸ್ಥಿರಾಸ್ತಿಗಳಿಗೆ)

ಕೆಳಸಹಿದಾರರು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಇದರ ಅಧಿಕೃತ ಅಧಿಕಾರಿಯಾಗಿದ್ದು, (ಈ ಮೊದಲು ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಗ ಹೊಂದಿದೆ) ಹಣಕಾಸು ಸ್ವತ್ತುಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್ ನಿರ್ಮಾಣ ಭದ್ರತೆ ಮತ್ತು ಭದ್ರತಾ ಹಿತಾಸಕ್ತಿ ನಿಯಮ 13(12) ರ ನಿಯಮ 3ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮಗಳು 2002ರ ಅನ್ವಯ ಈ ಕೆಳಗಿನ ಸಾಲಗಾರರಿಗೆ ದಿನಾಂಕ 30ಮೇ 2026 ರಂದು ತಗಾದೆ ಸೂಚನೆಯನ್ನು ನೀಡಿದ್ದು, ಸಾಲಗಾರರಾದ 1. ಸುರೇಶ್ ಜಿ, 2. ರೇಣುಕಮ್ಮ ಜಿ ಇವರಿಂದ 25 ಮೇ 2026ರವರೆಗೆ ಬರಬೇಕಾದ ಬಾಕಿ ರೂ.6,76,734.22 (ರೂಪಾಯಿ ಆರು ಲಕ್ಷದ ಎಪ್ಪತ್ತಾರು ಸಾವಿರದ ಏಳುನೂರ ಮೂವತ್ತನಾಲ್ಕು ರೂಪಾಯಿ ಮತ್ತು ಇಪ್ಪತ್ತೆರಡು ಪೈಸೆ ಮಾತ್ರ) ವನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗೆ ಮರುಪಾವತಿಸುವಂತೆ ಸೂಚಿಸಲಾಗಿತ್ತು.

ಸಾಲಗಾರರು ಹಣವನ್ನು ಮರುಪಾವತಿ ಮಾಡಲು ವಿಫಲರಾಗಿದ್ದು, ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕೆಳಸಹಿದಾರರು ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13 ರ ಸಬ್ ಸೆಕ್ಷನ್(4) ಕಾಯಿದೆಯ ನಿಯಮ 8 ನ್ನು ಓದಿಕೊಂಡಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 17ನೇ ಸೆಪ್ಟಂಬರ್2026 ಪಡಿಸಿಕೊಂಡಿರುತ್ತಾರೆ.

ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಸ್ವತ್ತುಗಳ ಬಗ್ಗೆ ಯಾರೂ ವ್ಯವಹರಿಸಕೂಡದು, ಒಂದು ವೇಳೆ ವ್ಯವಹರಿಸಿದ್ದೇ ಆದಲ್ಲಿ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಇದರ ಅಧಿಕೃತ ಅಧಿಕಾರಿಯಾಗಿದ್ದು, (ಈ ಮೊದಲು ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಗ ಹೊಂದಿದೆ) ಗೆ ಬರಬೇಕಾದ ಬಾಕಿ ಹಣ ರೂ.6,76,734.22 (ರೂಪಾಯಿ ಆರು ಲಕ್ಷದ ಎಪ್ಪತ್ತಾರು ಸಾವಿರದ ಏಳುನೂರ ಮೂವತ್ತನಾಲ್ಕು ರೂಪಾಯಿ ಮತ್ತು ಇಪ್ಪತ್ತೆರಡು ಪೈಸೆ ಮಾತ್ರ) ಹಾಗೂ ನಂತರದ ಬಡ್ಡಿಯನ್ನು ಪಾವತಿಸುವುದಕ್ಕೆ ಒಳಪಡುತ್ತದೆ.

ಸಾಲಗಾರರ ಗಮನಕ್ಕೆ ತರುವುದೇನೆಂದರೆ, ಸೆಕ್ಷನ್ 13ರ ಸಬ್ ಸೆಕ್ಷನ್ (8) ರ ಕಾಯಿದೆಯಂತೆ ಬಾಕಿ ಉಳಿದ ಕಾಲಾವಕಾಶದಲ್ಲಿ ಭದ್ರತಾ ಆಸ್ತಿಗಳನ್ನು ನೀವು ಮರುಪಡೆದುಕೊಳ್ಳಬಹುದಾಗಿದೆ.

ಸ್ಥಿರ ಆಸ್ತಿಯ ವಿವರ

ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ವಾಸಯೋಗ್ಯ ಆಸ್ತಿಯ ಇ–ಸ್ವತ್ತು ನಂ. 151200201100221394 (ನಮೂನೆ ಸಂ. ರಂತೆ), 11ಬಿ, ಆಸ್ತಿ ನಂ.77/1, ಪ್ರದೇಶ 85.47 ಚದರ ಮೀಟರ್ (ಪೂರ್ವ–ಪಶ್ಚಿಮ 9.144 ಮೀಟರ್‌ಗಳು ಮತ್ತು ಉತ್ತರ 7.010 ಮೀಟರ್‌ಗಳು), ಗ್ರಾಮ : ಅನಗೋಡು, ಅನಗೋಡು ಗ್ರಾಮ ಪಂಚಾಯತ್ ವ್ಯಾಪ್ತಿ, ದಾವಣಗೆರೆ ತಾಲೂಕು ಮತ್ತು ಜಿಲ್ಲೆ, ಕರ್ನಾಟಕ–577556 ಇಲ್ಲಿದ್ದು ಮತ್ತು ಚಕ್ಕುಬಂದಿ ; ಪೂರ್ವಕ್ಕೆ : ಖಾಲಿ ನಿವೇಶನ, ಪಶ್ಚಿಮಕ್ಕೆ : ಸಾವಿತ್ರಮ್ಮರವರ ಮನೆ, ಉತ್ತರಕ್ಕೆ : ಗ್ರಾಮ ಪಮಚಾಯತ್ ರಸ್ತೆ, ದಕ್ಷಿಣಕ್ಕೆ : ಖಾಸಗಿ ಭೂಮಿ.

ದಿನಾಂಕ: 17.09.2026
ಸ್ಥಳ: ಕರ್ನಾಟಕ
ಸಾಲದ ಖಾತಾ ಸಂ. : 105993868

ಅಧಿಕೃತ ಅಧಿಕಾರಿ
ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್ (ಈ ಮೊದಲು ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಗ ಹೊಂದಿದೆ)

ಗೌರವಾನ್ವಿತ ಹೊಳಲ್ಕೆರೆ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯದಲ್ಲಿ.

ಸಿ.ಆರ್.ಮಿಸ್.ನಂ.: 12/2026

ಅರ್ಜಿದಾರರು: 1. ಮಹಾಲಿಂಗಪ್ಪ ಬಿನ್ ಲೇಟ್ ಶಿವನಪ್ಪ, ವಯಸ್ಸು 60 ವರ್ಷ, ಸಿಂಗಾಪುರ ಗ್ರಾಮ, ಚಿತ್ರದುರ್ಗ ತಾಲ್ಲೂಕು & ಜಿಲ್ಲೆ. 2. ಕರಿಬಸಪ್ಪ.ಕೆ.ಎನ್. ಬಿನ್ ಲೇಟ್ ನಿಂಗಪ್ಪ.ಕೆ.ಎಸ್. ವಯಸ್ಸು 37 ವರ್ಷ. 3. ಕಲ್ಲೇಶ್.ಕೆ.ಎನ್. ಬಿನ್ ಲೇಟ್ ನಿಂಗಪ್ಪ.ಕೆ.ಎಸ್. ವಯಸ್ಸು 35 ವರ್ಷ. ಎಲ್ಲರೂ ವ್ಯವಸಾಯ ಕೆಲಸ. ಅರ್ಜಿದಾರ ನಂ:2 & 3 ರವರು ಈಚಘಟ್ಟ ಗ್ರಾಮ, ತಾಳ್ಯ ಹೋಬಳಿ, ಹೊಳಲ್ಕೆರೆ ತಾಲ್ಲೂಕು, **–ವಿರುದ್ಧ–**
ಎದುರುದಾರರು: ಜನನ ಮತ್ತು ಮರಣ ನೋಂದಣಾಧಿಕಾರಿಗಳು/ಮಾನ್ಯ ತಹಶೀಲ್ದಾರ್‌ರವರ ತಾಲ್ಲೂಕು ಕಛೇರಿ. ಹೊಳಲ್ಕೆರೆ.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಕೇಸಿನ 1ನೇ ಅರ್ಜಿದಾರರ ತಂದೆ, 2 ಮತ್ತು 3ನೇ ಅರ್ಜಿದಾರರ ಅಜ್ಜನಾದ ಶ್ರೀ ಶಿವನಪ್ಪ ಬಿನ್ ನಿಂಗಪ್ಪ ರವರು ಹೊಳಲ್ಕೆರೆ ತಾಲ್ಲೂಕು, ತಾಳ್ಯ ಹೋಬಳಿ, ಈಚಘಟ್ಟ ಗ್ರಾಮದಲ್ಲಿ ದಿನಾಂಕ: 15–04–1983 ರಂದು ಮರಣ ಹೊಂದಿರುತ್ತಾರೆ ಎಂದು ಮರಣ ಸಮರ್ಥನ ಪತ್ರ ಪಡೆಯಲು ಎದುರುದಾರರ ವಿರುದ್ಧ ಅರ್ಜಿದಾರರು ಮಾನ್ಯ ಹೊಳಲ್ಕೆರೆಯ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಶ್ರೀ ಶಿವನಪ್ಪ ಬಿನ್ ನಿಂಗಪ್ಪ ರವರ ಮರಣ ಸಮರ್ಥನ ಪತ್ರ ಪಡೆಯುವ ಬಗ್ಗೆ ಬೇರೆ ಯಾರಿಗಾದರೂ ತಂಟೆ ತಕರಾರು ಇದ್ದಲ್ಲಿ ಹೊಳಲ್ಕೆರೆಯ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ದಿನಾಂಕ : 24–10–2026 ಬೆಳಿಗ್ಗೆ 11–00 ಗಂಟೆಗೆ ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಲಿಖಿತ ತಕರಾರು/ಆಕ್ಷೇಪಣೆಗಳು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು, ತಪ್ಪಿದ ಪಕ್ಷದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ. ನ್ಯಾಯಾಲಯದ ಮುದ್ರೆ ನನ್ನ ಸಹಿಯೊಂದಿಗೆ ದಿನಾಂಕ: 17–09–2026 ರಂದು ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೇದಾರ್, ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಳಲ್ಕೆರೆ.
ಅರ್ಜಿದಾರರ ಪರ ವಕೀಲರು
ಸಹಿ/– **ಶ್ರೀ ಎಸ್.ವೇದಮೂರ್ತಿ,** ವಕೀಲರು, ಹೊಳಲ್ಕೆರೆ
ದಿನಾಂಕ: 17–9–2026. ಹೊಳಲ್ಕೆರೆ.

ಗೌರವಾನ್ವಿತ ಹೊಳಲ್ಕೆರೆ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯದಲ್ಲಿ.

ಸಿ.ಆರ್.ಮಿಸ್.ನಂ.: 11/2026

ಅರ್ಜಿದಾರರು: 1. ಮಹಾಲಿಂಗಪ್ಪ ಬಿನ್ ಲೇಟ್ ಶಿವನಪ್ಪ, ವಯಸ್ಸು 60 ವರ್ಷ, ಸಿಂಗಾಪುರ ಗ್ರಾಮ, ಚಿತ್ರದುರ್ಗ ತಾಲ್ಲೂಕು & ಜಿಲ್ಲೆ. 2. ಕರಿಬಸಪ್ಪ.ಕೆ.ಎನ್. ಬಿನ್ ಲೇಟ್ ನಿಂಗಪ್ಪ.ಕೆ.ಎಸ್. ವಯಸ್ಸು 37 ವರ್ಷ. 3. ಕಲ್ಲೇಶ್.ಕೆ.ಎನ್. ಬಿನ್ ಲೇಟ್ ನಿಂಗಪ್ಪ.ಕೆ.ಎಸ್. ವಯಸ್ಸು 35 ವರ್ಷ. ಎಲ್ಲರೂ ವ್ಯವಸಾಯ ಕೆಲಸ. ಅರ್ಜಿದಾರ ನಂ:2 & 3 ರವರು ಈಚಘಟ್ಟ ಗ್ರಾಮ, ತಾಳ್ಯ ಹೋಬಳಿ, ಹೊಳಲ್ಕೆರೆ ತಾಲ್ಲೂಕು, **–ವಿರುದ್ಧ–**
ಎದುರುದಾರರು: ಜನನ ಮತ್ತು ಮರಣ ನೋಂದಣಾಧಿಕಾರಿಗಳು/ಮಾನ್ಯ ತಹಶೀಲ್ದಾರ್‌ರವರ ತಾಲ್ಲೂಕು ಕಛೇರಿ. ಹೊಳಲ್ಕೆರೆ.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಕೇಸಿನ 1ನೇ ಅರ್ಜಿದಾರರ ಸಹೋದರ, 2 ಮತ್ತು 3ನೇ ಅರ್ಜಿದಾರರ ಚಿಕ್ಕಪ್ಪನಾದ ಶ್ರೀ ಓಂಕಾರಪ್ಪ. ಕೆ.ಎಸ್ ಬಿನ್ ಶಿವನಪ್ಪ ರವರು ಹೊಳಲ್ಕೆರೆ ತಾಲ್ಲೂಕು, ತಾಳ್ಯ ಹೋಬಳಿ, ಈಚಘಟ್ಟ ಗ್ರಾಮದಲ್ಲಿ ದಿನಾಂಕ: 13–01–2021 ರಂದು ಮರಣ ಹೊಂದಿರುತ್ತಾರೆ ಎಂದು ಮರಣ ಸಮರ್ಥನ ಪತ್ರ ಪಡೆಯಲು ಎದುರುದಾರರ ವಿರುದ್ಧ ಅರ್ಜಿದಾರರು ಮಾನ್ಯ ಹೊಳಲ್ಕೆರೆಯ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಶ್ರೀ ಓಂಕಾರಪ್ಪ.ಕೆ.ಎಸ್ ಬಿನ್ ಶಿವನಪ್ಪ ರವರ ಮರಣ ಸಮರ್ಥನ ಪತ್ರ ಪಡೆಯುವ ಬಗ್ಗೆ ಬೇರೆ. ಯಾರಿಗಾದರೂ ತಂಟೆ ತಕರಾರು ಇದ್ದಲ್ಲಿ ಹೊಳಲ್ಕೆರೆಯ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ದಿನಾಂಕ: 24–10–2026 ಬೆಳಿಗ್ಗೆ 11:00 ಗಂಟೆಗೆ ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಲಿಖಿತ ತಕರಾರು/ಆಕ್ಷೇಪಣೆಗಳು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು, ತಪ್ಪಿದ ಪಕ್ಷದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ. ನ್ಯಾಯಾಲಯದ ಮುದ್ರೆ ನನ್ನ ಸಹಿಯೊಂದಿಗೆ ದಿನಾಂಕ: 17–09–2026 ರಂದು ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೇದಾರ್, ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಳಲ್ಕೆರೆ.
ಅರ್ಜಿದಾರರ ಪರ ವಕೀಲರು
ಸಹಿ/– **ಶ್ರೀ ಎಸ್.ವೇದಮೂರ್ತಿ,** ವಕೀಲರು, ಹೊಳಲ್ಕೆರೆ
ದಿನಾಂಕ: 17–9–2026. ಹೊಳಲ್ಕೆರೆ.

ಗೌರವಾನ್ವಿತ ಹೊಳಲ್ಕೆರೆ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯದಲ್ಲಿ.

ಸಿ.ಆರ್.ಮಿಸ್.ನಂ.: 10/2026

ಅರ್ಜಿದಾರರು: 1. ಮಹಾಲಿಂಗಪ್ಪ ಬಿನ್ ಲೇಟ್ ಶಿವನಪ್ಪ, ವಯಸ್ಸು 60 ವರ್ಷ, ಸಿಂಗಾಪುರ ಗ್ರಾಮ, ಚಿತ್ರದುರ್ಗ ತಾಲ್ಲೂಕು & ಜಿಲ್ಲೆ. 2. ಕರಿಬಸಪ್ಪ.ಕೆ.ಎನ್. ಬಿನ್ ಲೇಟ್ ನಿಂಗಪ್ಪ.ಕೆ.ಎಸ್. ವಯಸ್ಸು 37 ವರ್ಷ. 3. ಕಲ್ಲೇಶ್.ಕೆ.ಎನ್. ಬಿನ್ ಲೇಟ್ ನಿಂಗಪ್ಪ.ಕೆ.ಎಸ್. ವಯಸ್ಸು 35 ವರ್ಷ. ಎಲ್ಲರೂ ವ್ಯವಸಾಯ ಕೆಲಸ. ಅರ್ಜಿದಾರ ನಂ:2 & 3 ರವರು ಈಚಘಟ್ಟ ಗ್ರಾಮ, ತಾಳ್ಯ ಹೋಬಳಿ, ಹೊಳಲ್ಕೆರೆ ತಾಲ್ಲೂಕು, **–ವಿರುದ್ಧ–**
ಎದುರುದಾರರು: ಜನನ ಮತ್ತು ಮರಣ ನೋಂದಣಾಧಿಕಾರಿಗಳು/ಮಾನ್ಯ ತಹಶೀಲ್ದಾರ್‌ರವರ ತಾಲ್ಲೂಕು ಕಛೇರಿ. ಹೊಳಲ್ಕೆರೆ.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಕೇಸಿನ 1ನೇ ಅರ್ಜಿದಾರರ ತಾಯಿ, 2 ಮತ್ತು 3ನೇ ಅರ್ಜಿದಾರರ ಅಜ್ಜಿಯಾದ ಶ್ರೀಮತಿ ಕಲ್ಲಮ್ಮ ಕೋಂ ಶಿವನಪ್ಪ ರವರು ಹೊಳಲ್ಕೆರೆ ತಾಲ್ಲೂಕು, ತಾಳ್ಯ ಹೋಬಳಿ, ಈಚಘಟ್ಟ ಗ್ರಾಮದಲ್ಲಿ ದಿನಾಂಕ:04–05–1985 ರಂದು ಮರಣ ಹೊಂದಿರುತ್ತಾರೆ ಎಂದು ಮರಣ ಸಮರ್ಥನ ಪತ್ರ ಪಡೆಯಲು ಎದುರುದಾರರ ವಿರುದ್ಧ ಅರ್ಜಿದಾರರು ಮಾನ್ಯ ಹೊಳಲ್ಕೆರೆಯ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಶ್ರೀಮತಿ ಕಲ್ಲಮ್ಮ ಕೋಂ ಶಿವನಪ್ಪ ರವರ ಮರಣ ಸಮರ್ಥನ ಪತ್ರ ಪಡೆಯುವ ಬಗ್ಗೆ ಬೇರೆ ಯಾರಿಗಾದರೂ ತಂಟೆ ತಕರಾರು ಇದ್ದಲ್ಲಿ ಹೊಳಲ್ಕೆರೆಯ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ದಿನಾಂಕ: 24–10–2026 ಬೆಳಿಗ್ಗೆ 11:00 ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಲಿಖಿತ ತಕರಾರು/ಆಕ್ಷೇಪಣೆಗಳು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು, ತಪ್ಪಿದ ಪಕ್ಷದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ. ನ್ಯಾಯಾಲಯದ ಮುದ್ರೆ ನನ್ನ ಸಹಿಯೊಂದಿಗೆ ದಿನಾಂಕ: 17–09–2026 ರಂದು ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೇದಾರ್, ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಳಲ್ಕೆರೆ.
ಅರ್ಜಿದಾರರ ಪರ ವಕೀಲರು
ಸಹಿ/– **ಶ್ರೀ ಎಸ್.ವೇದಮೂರ್ತಿ,** ವಕೀಲರು, ಹೊಳಲ್ಕೆರೆ
ದಿನಾಂಕ: 17–9–2026. ಹೊಳಲ್ಕೆರೆ.

ಐಡಿಎಫ್ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್

(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್, ಐಡಿಎಫ್ಸಿ ಬ್ಯಾಂಕ್ ಲಿಮಿಟೆಡ್ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂದು ಕರೆಯಲ್ಪಡುತ್ತದೆ) । ಸಿಐಎನ್: L65110TN2014PLC097792
ನೋಂದಾಯಿತ ಕಚೇರಿ: – KRM ಟವರ್ಸ್, 8 ನೇ ಮಹಡಿ, ಹ್ಯಾರಿಂಗ್ಟನ್ ರಸ್ತೆ, ಚೆಟ್ಪೇಟ್, ಚೆನ್ನೈ– 600031.
ದೂರವಾಣಿ: +91 44 4564 4000 । ಫ್ಯಾಕ್ಸ್: +91 44 4564 4022

IDFC FIRST Bank

ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ, 2002 ರ ಸೆಕ್ಷನ್ 13 (2) ರ ಅಡಿಯಲ್ಲಿ ಸೂಚನೆ

ಈ ಕೆಳಗಿನ ಸಾಲಗಾರರು ಮತ್ತು ಸಹ–ಸಾಲಗಾರರು **ಐಡಿಎಫ್ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ನಿಂದ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್, ಐಡಿಎಫ್ಸಿ ಬ್ಯಾಂಕ್ ಲಿಮಿಟೆಡ್ನೊಂದಿಗೆ ವಿಲೀನಗೊಂಡು ಪ್ರಸ್ತುತ ಐಡಿಎಫ್ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂದು ಕರೆಯಲಾಗುತ್ತದೆ)** ಕೆಳಗೆ ತಿಳಿಸಲಾದ ಸುರಕ್ಷಿತ ಸಾಲಗಳನ್ನು ಪಡೆದುಕೊಂಡಿದ್ದಾರೆ. ಕೆಳಗೆ ತಿಳಿಸಲಾದ ಸಾಲಗಾರರು ಮತ್ತು ಸಹ–ಸಾಲಗಾರರ ಸಾಲಗಳನ್ನು ಅವರ ಆಯಾ ಆಸ್ತಿಗಳ ಅಡಮಾನದಿಂದ ಪಡೆಯಲಾಗಿದೆ. ಅವರು ಆಯಾ ಸಾಲ ಒಪ್ಪಂದಗಳ ನಿಯಮಗಳು ಮತ್ತು ಷರತ್ತುಗಳನ್ನು ಪಾಲಿಸಲು ವಿಫಲರಾಗಿರುವುದರಿಂದ ಮತ್ತು ಅನಿಯಮಿತವಾಗಿರುವುದರಿಂದ, ಅವರ ಸಾಲವನ್ನು ಆರ್‌ಬಿಐ ಮಾರ್ಗಸೂಚಿಗಳ ಪ್ರಕಾರ ಎನ್‌ಪಿಎ ಎಂದು ವರ್ಗೀಕರಿಸಲಾಗಿದೆ. **ಐಡಿಎಫ್ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ಗೆ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್, ಐಡಿಎಫ್ಸಿ ಬ್ಯಾಂಕ್ ಲಿಮಿಟೆಡ್ನೊಂದಿಗೆ ವಿಲೀನಗೊಂಡು ಪ್ರಸ್ತುತ ಐಡಿಎಫ್ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂದು ಕರೆಯಲಾಗುತ್ತದೆ)** ಅವರು ಪಾವತಿಸಬೇಕಾದ ಮೊತ್ತವನ್ನು ಈ ಕೆಳಗಿನ ಕೋಷ್ಟಕದಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಸಂಬಂಧಿತ ಸೂಚನೆಗಳ ಪ್ರಕಾರ ಉಲ್ಲೇಖಿಸಲಾಗಿದೆ ಮತ್ತು ಹೇಳಲಾದ ಮೊತ್ತಗಳ ಮೇಲಿನ ಹೆಚ್ಚಿನ ಬಡ್ಡಿಯೂ ಅನ್ವಯಿಸುತ್ತದೆ ಮತ್ತು ಆಯಾ ದಿನಾಂಕಗಳಿಂದ ಜಾರಿಗೆ ಬರುವ ಒಪ್ಪಂದದ ದರದ ಪ್ರಕಾರ ಅದನ್ನು ವಿಧಿಸಲಾಗುತ್ತದೆ.

ಕ್ರ.ಸಂ.	ಸಾಲದ ಖಾತೆ ಸಂಖ್ಯೆ.	ಸಾಲದ ವಿಧ	ಸಾಲಗಾರರು ಮತ್ತು ಸಹ–ಸಾಲಗಾರರ ಹೆಸರು	ಸೂಚನೆ ದಿನಾಂಕ ವಿಭಾಗ 13 (2)	ಸೆಕ್ಷನ್ 13 (2) ಸೂಚನೆಯ ಪ್ರಕಾರ ಬಾಕಿ ಮೊತ್ತ
1	114816495	ಆಸ್ತಿಯ ಮೇಲಿನ ಸಾಲ	1. ಪ್ರೇಮಾ ಎಚ್ 2. ಸಣ್ಣಹನುಮಂತಬೋವಿ ಎಚ್	09 ಸೆಪ್ಟೆಂಬರ್ 2026	ರೂ 7,80,227.98/–

ಆಸ್ತಿ ವಿಳಾಸ: ಆಸ್ತಿಯ ಎಲ್ಲಾ ಭಾಗ ಮತ್ತು ವಿಭಾಗಗಳು ಇ–ಸ್ವತ್ತು ಸಂಖ್ಯೆ 150900703300400154, ಆಸ್ತಿ ಸಂಖ್ಯೆ 4, ಪೂರ್ವ–ಪಶ್ಚಿಮ ಅಳತೆ: 9.144 ಮೀಟರ್ X ಉತ್ತರ–ದಕ್ಷಿಣ: 12.192 ಮೀಟರ್ 111.48 ಚದರ ಮೀಟರ್, ಅರಸೀಕೆರೆ ಗ್ರಾಮ, ಭಾವಿಕೆರೆ ಗ್ರಾಮ ಪಂಚಾಯತ್, ಲಕ್ಕವಳ್ಳಿ ಹೋಬಳಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕ, ಮತ್ತು **ಗಡಿಗಳು: ಪೂರ್ವ:** ಸರ್ಕಾರಿ ಆಸ್ತಿ **ಪಶ್ಚಿಮ:** ರಸ್ತೆ **ಉತ್ತರ:** ಈರಮ್ಮನ ಆಸ್ತಿ **ದಕ್ಷಿಣ:** ದುರ್ಗಮ್ಮನ ಆಸ್ತಿ

ಮೇಲಿನ ಕೋಷ್ಟಕದಲ್ಲಿ ತೋರಿಸಿರುವ ವಿವರಗಳ ಪ್ರಕಾರ, ಅವುಗಳ ದಿನಾಂಕಗಳು ಮತ್ತು ಇತರ ವೆಚ್ಚಗಳು, ಶುಲ್ಕಗಳು ಇತ್ಯಾದಿಗಳಿಂದ ಒಪ್ಪಂದದ ಬಡ್ಡಿದರದೊಂದಿಗೆ, ಮೇಲಿನ ಪ್ರಕಟಣೆಯ ದಿನಾಂಕದಿಂದ 60 ದಿನಗಳ ಒಳಗೆ **IDFC FIRST ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್, IDFC ಬ್ಯಾಂಕ್ ಲಿಮಿಟೆಡ್ನೊಂದಿಗೆ ವಿಲೀನಗೊಂಡು ಪ್ರಸ್ತುತ IDFC ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂದು ಕರೆಯಲ್ಪಡುತ್ತದೆ)** ಗೆ ಮೊತ್ತವನ್ನು ಪಾವತಿಸಲು ನಿಮ್ಮನ್ನು ಇಲ್ಲಿ ಕೇಳಲಾಗಿದೆ. ಇಲ್ಲದಿದ್ದರೆ, ಕೆಳಗೆ ಸಹಿ ಮಾಡಿದವರು SARFAESI ಕಾಯ್ದೆಯ ಸೆಕ್ಷನ್ 13 (4) ಮತ್ತು ಸೆಕ್ಷನ್ 14 ರ ಅಡಿಯಲ್ಲಿ, ಮೇಲೆ ಉಲ್ಲೇಖಿಸಲಾದ ಅಡಮಾನದ ಆಸ್ತಿಗಳ ವಿರುದ್ಧ **IDFC FIRST ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್, IDFC ಬ್ಯಾಂಕ್ ಲಿಮಿಟೆಡ್ನೊಂದಿಗೆ ವಿಲೀನಗೊಂಡು ಪ್ರಸ್ತುತ IDFC ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂದು ಕರೆಯಲ್ಪಡುತ್ತದೆ)** ಗೆ ಬಾಕಿ ಇರುವ ಮೊತ್ತವನ್ನು ವಸೂಲಿ ಮಾಡಲು SARFAESI ಕಾಯ್ದೆಯ ಸೆಕ್ಷನ್ 13 (4) ಮತ್ತು ಸೆಕ್ಷನ್ 14 ರ ಅಡಿಯಲ್ಲಿ ಕ್ರಮಗಳನ್ನು ಪ್ರಾರಂಭಿಸಲು ನಿರ್ಬಂಧಿಸಲಾಗುತ್ತದೆ. ಇದಲ್ಲದೆ, ಈ ಕಾಯ್ದೆಯ ಸೆಕ್ಷನ್ 13 (13) ಅಡಿಯಲ್ಲಿ ಮಾರಾಟ/ಗುತ್ತಿಗೆ ಅಥವಾ ಬೇರೆ ರೀತಿಯಲ್ಲಿ ಸದರಿ ಸುರಕ್ಷಿತ ಸ್ವತ್ತುಗಳನ್ನು ವರ್ಗಾಯಿಸುವುದನ್ನು ನೀವು ನಿಷೇಧಿಸಲಾಗಿದೆ.

ಸಹಿ/– ಅಧಿಕೃತ ಅಧಿಕಾರಿ
IDFC ಫಸ್ಟ್ ಬ್ಯಾಂಕ್ ಲಿಮಿಟೆಡ್
(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್, ಐಡಿಎಫ್ಸಿ ಬ್ಯಾಂಕ್ ಲಿಮಿಟೆಡ್ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂದು ಕರೆಯಲ್ಪಡುತ್ತದೆ)

ದಿನಾಂಕ: 23.09.2026.
ಸ್ಥಳ: ಚಿಕ್ಕಮಗಳೂರು, ಕರ್ನಾಟಕ.

---

equitas SMALL FINANCE BANK LTD

ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ (ಈ ಮುಂಚೆ ಈಕ್ವಿಟಾಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ನೋಂದಾಯಿತ ಕಛೇರಿ : ನಂ.769, ಸ್ಪೆನ್ಸರ್ ಪ್ಲಾಜಾ, 4ನೇ ಮಹಡಿ, ಹಂತ–II, ಅಣ್ಣಾ ಸಲೈ, ಚೆನ್ನೈ, ತಮಿಳುನಾಡು–600 002.
044–42995000, 044–42995050

ಸ್ಥಿರಾಸ್ತಿಯ ಮಾರಾಟಕ್ಕಾಗಿ ಹರಾಜು ಮಾರಾಟದ ಸೂಚನೆ

ಅನುಬಂಧ IV-A [ನಿಯಮ 8(6) ರ ನಿಬಂಧನೆಯನ್ನು ನೋಡಿ] – ಸ್ಥಿರಾಸ್ತಿಗಳ ಮಾರಾಟದ ಸೂಚನೆ

2002 ರ ಹಣಕಾಸು ಆಸ್ತಿಗಳ ಸೆಕ್ಯೂರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಸೆಕ್ಯೂರಿಟಿ ಬಡ್ಡಿ ಜಾರಿ ಕಾಯ್ದೆಯಡಿ ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಇ–ಹರಾಜು ಮಾರಾಟ ಸೂಚನೆಯನ್ನು ಭದ್ರತಾ ಬಡ್ಡಿ (ಜಾರಿ) ನಿಯಮಗಳು, 2002 ರ ನಿಯಮ 8 (6) ರ ನಿಬಂಧನೆಯೊಂದಿಗೆ ಓದಲಾಗಿದೆ. ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಸಾಲಗಾರರು, ಅಡಮಾನದಾರರು ಮತ್ತು ಖಾತರಿದಾರರು (ಗಳು) ಗೆ ಸೂಚನೆ ನೀಡಲಾಗಿದೆ, ಈಕ್ವಿಟಾಸ್ ಸಣ್ಣ ಹಣಕಾಸು ಬ್ಯಾಂಕಿನ ಅಧಿಕೃತ ಅಧಿಕಾರಿ, ಸೆಕ್ಯೂರ್ಡ್ ಕ್ರೆಡಿಟರ್ ಅವರು ಸ್ವಾಧೀನಪಡಿಸಿಕೊಂಡಿರುವ ಸೆಕ್ಯೂರ್ಡ್ ಕ್ರೆಡಿಟ್‌ಗೆ ಮಾರ್ಟಗೇಜ್ ಮಾಡಲಾದ/ವಿಧಿಸಲಾದ ಕೆಳಗೆ ವಿವರಿಸಿದ ಸ್ಥಿರ ಆಸ್ತಿಯನ್ನು "ಎಲ್ಲಿ ಇದೆಯೋ ಹಾಗೆಯೇ", "ಏನಿದೆಯೋ ಹಾಗೆಯೇ" ಮತ್ತು "ಕೆಳಗೆ ತಿಳಿಸಲಾದ ಖಾತೆಗಳಲ್ಲಿ ಬಾಕಿಗಳನ್ನು ವಸೂಲಿ ಮಾಡಲು ಆಧಾರವಿದೆಯೋ ಅಲ್ಲಿ ಮಾರಾಟ ಮಾಡಲಾಗುತ್ತದೆ. ಸಾಲಗಾರರ (ರು) ಅಡಮಾನದಾರರು/ಜಾಮೀನುದಾರರು/ ಸೆಕ್ಯೂರ್ಡ್ ಆಸ್ತಿಗಳ ಬಾಕಿಗಳ ಮೀಸಲು ಬೆಲೆ/ಇ–ಹರಾಜು ದಿನಾಂಕ ಮತ್ತು ಸಮಯ ಮತ್ತು ಬಿಡ್ ಹೆಚ್ಚಳ ಮೊತ್ತದ ವಿವರಗಳನ್ನು ಕೆಳಗೆ ಉಲ್ಲೇಖಿಸಲಾಗಿದೆ.

ಕ್ರ. ಸಂ.	ಸಾಲಗಾರರು/ ಅಡಮಾನದಾರರು/ ಜಾಮೀನುದಾರರ ಹೆಸರು ಮತ್ತು ವಿಳಾಸ	ತಿಳಿದಿರುವ ಹೊರೆಗಳನ್ನು ಹೊಂದಿರುವ ಸ್ಥಿರಾಸ್ತಿಗಳ ವಿವರಣೆ, ಯಾವುದಾದರೂ ಇದ್ದರೆ	ಮೀಸಲು ಬೆಲೆ ಇಎಂಡಿ ಬೆಲೆ ಬಿಡ್ ಹೆಚ್ಚಳ ಬೆಲೆ	ಹರಾಜಿನ ದಿನಾಂಕ ಮತ್ತು ಸಮಯ	ಸಾಲ / ಒಟ್ಟು ಬಾಕಿಗಳು
1	**ಶ್ರೀ/ಶ್ರೀಮತಿ ರಾಜಶೇಖರಗೌಡ ಕೆ ಹೆಚ್ C/O ಶ್ರೀ/ಶ್ರೀಮತಿ ಹಿರಿಯಣ್ಣ ಕಲ್ಲಹಳ್ಳಿ ಮಳಲೂರು ಮುಗ್ತಿಹಳ್ಳಿ ಚಿಕ್ಕಮಗಳೂರು, ಮುಗ್ತಿಹಳ್ಳಿ, ಚಿಕ್ಕಮಗಳೂರು, ಕರ್ನಾಟಕ, 577133 ಶ್ರೀ/ಶ್ರೀಮತಿ ಶೇಷಮ್ಮ C/O ಶ್ರೀ/ಶ್ರೀಮತಿ ಕಲ್ಲೆ ಕೋಂ ಹಿರೇಯಣ್ಣ ಗೌಡ,** ಮಳಲೂರು, ಮುಗತಿಹಳ್ಳಿ, ಮಳಲೂರು (Ckm), ಚಿಕ್ಕಮಗಳೂರು, ಕರ್ನಾಟಕ – 577133.	ಖಾತಾ ನಂ.95, ಜಿ.ಪಿ.ಸಂ. 150900103200520175, ಮಳಲೂರು ಗ್ರಾಮ ಮತ್ತು ಗ್ರಾಮದಲ್ಲಿದೆ ಪಂಚಾಯತ್, ಚಿಕ್ಕಮಗಳೂರು ತಾಲೂಕು ಮತ್ತು ಜಿಲ್ಲೆ. (ಉತ್ತರದಿಂದ) – ಮಂಜುಳಾ ಕೋಂ ಅವರ ಆಸ್ತಿ. ಇಂದ್ರೇಶ (ದಕ್ಷಿಣದಿಂದ)– ಕೃಷ್ಣೇಗೌಡರ ಆಸ್ತಿ (ಪೂರ್ವದಿಂದ)– ಹಿರಿಯಣ್ಣ ಗೌಡರ ಆಸ್ತಿ ತೆನ್ ರೋಡ್, (ಪಶ್ಚಿಮದಿಂದ)–ಮಂಜುಳಾ ಕೋಂ ನಾರಾಯಣ ಅವರ ಆಸ್ತಿ.	**ರೂ. 10,87,000/–** **ರೂ. 1,08,700/–** **ರೂ. 10,000/–**	**27–10–2026 ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ**	ಸಾಲದ ಖಾತೆ ಸಂಖ್ಯೆ:– **SECHMGR0327971.** ಪಾವತಿಸಬೇಕಾದ ಮೊತ್ತ 16.07.2025 ರಂತೆ ರೂ. 4,77,192/– ಜೊತೆಗೆ 17.07.2025 ರಿಂದ ಮುಂದಿನ ಬಡ್ಡಿ (ಮಾಸಿಕ ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ), ಶುಲ್ಕಗಳು ಮತ್ತು ವೆಚ್ಚಗಳು ಇತ್ಯಾದಿ, (ಒಟ್ಟು ಬಾಕಿ ಮೊತ್ತವು 14.09.2026 ರಂತೆ ರೂ. 6,72,087/– ಆಗಿರುತ್ತದೆ).
	ಖರೀದಿ ಮತ್ತು ಮಾರಾಟದ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಪ್ರಶ್ನೆಗಳಿಗೆ ಸಂಪರ್ಕಿಸಿ: ಸಂಗಮ ಎಚ್. ಎಸ್. 9686451317, ದರ್ಶನ ಕೆ.ಎಂ. 9611143773.				
2	**ರೋಜಾ ಡಿ ಜೆ** ಡಬ್ಲ್ಯು_ಓ_ಕುಮಾರಸ್ವಾಮಿ_ಜಿ_ಎಸ್_ಗಾಳಿಹಳ್ಳಿ, ಕಳಸಾಪುರ_ಲಕ್ಯ, ಚಿಕ್ಕಮಗಳೂರು, ಕಳಸಾಪುರ ಎಸ್.ಓ – ದಕ್ಷಿಣ ಕರ್ನಾಟಕ, ಕರ್ನಾಟಕ – 577146 **ಕುಮಾರಸ್ವಾಮಿ ಜಿ ಎಸ್** W_O_ಕುಮಾರಸ್ವೇ_ಜಿ_ಎಸ್_ಗಾಳಿಹಳ್ಳಿ, ಕಳಸಾಪುರ_ಲಕ್ಯ, ಚಿಕ್ಕಮಗಳೂರು, ಕಳಸಾಪುರ ಎಸ್.ಓ–ದಕ್ಷಿಣ ಕರ್ನಾಟಕ, ಕರ್ನಾಟಕ – 577146.	ಸ್ಥಿರಾಸ್ತಿಯ ವಿವರ: ಆಸ್ತಿ ಸಂಖ್ಯೆ 150900100700200276 ಆರ್‌ಡಿಪಿಆರ್ ಸಂಖ್ಯೆ 150900100700200276, ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆಯ ಈಶ್ವರಹಳ್ಳಿ ಗ್ರಾಮ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದೆ. ಚಕ್ಕುಬಂದಿ: ಪೂರ್ವ–ಪಶ್ಚಿಮ 6.7056000000004 ಮೀ.ಗಳು ಮತ್ತು ಉತ್ತರ–ದಕ್ಷಿಣ 10.0584 ಮೀ.ಗಳು. ಒಟ್ಟು ವಿಸ್ತೀರ್ಣ 67.45 ಚದರ ಮೀ.ಗಳು ಹಾಗೂ ನಿರ್ಮಿತ ಪ್ರದೇಶ 67.45 ಚದರ ಮೀ.ಗಳು. ಇದರ ಚಕ್ಕುಬಂದಿ: ಉತ್ತರಕ್ಕೆ–ರಸ್ತೆ, ದಕ್ಷಿಣಕ್ಕೆ– ಸುರೇಶ್ ಅವರ ಆಸ್ತಿ, ಪೂರ್ವಕ್ಕೆ – ಶಿವರಾಜ್ ಜಿ.ಎಸ್., ಪಶ್ಚಿಮಕ್ಕೆ – ಪುಟ್ಟಯ್ಯ ಅವರ ಆಸ್ತಿ.	**ರೂ. 3,77,000/–** **ರೂ. 37,700/–** **ರೂ. 10,000/–**	**27–10–2026 ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ**	ಸಾಲದ ಖಾತೆ ಸಂಖ್ಯೆ:– **700009884044,** ಪಾವತಿಸಬೇಕಾದ ಮೊತ್ತ 05.05.2025 ರಂತೆ ರೂ.4,14,419/– ಜೊತೆಗೆ 06.05.2025 ರಿಂದ ಮಾಸಿಕ ಬಡ್ಡಿ ಲೆಕ್ಕಾಚಾರದೊಂದಿಗೆ ಹೆಚ್ಚುವರಿ ಬಡ್ಡಿ, ಶುಲ್ಕಗಳು ಮತ್ತು ವೆಚ್ಚಗಳು ಇತ್ಯಾದಿ, (ಒಟ್ಟು ಬಾಕಿ ಮೊತ್ತ ರೂ.6,56,509/– 14.09.2026 ರಂತೆ).
	ಖರೀದಿ ಮತ್ತು ಮಾರಾಟದ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಪ್ರಶ್ನೆಗಳಿಗೆ ಸಂಪರ್ಕಿಸಿ: ಸಂಗಮ ಎಚ್. ಎಸ್. 9686451317, ದರ್ಶನ ಕೆ.ಎಂ. 9611143773.				

ಖರೀದಿದಾರರು/ಬಿಡ್ಡರ್‌ಗಳು ಮುಂಗಡ ಹಣ ಠೇವಣಿ (ಇಎಂಡಿ) ಮೊತ್ತವನ್ನು ಎನ್‌ಇಎಫ್‌ಟಿ/ಆರ್‌ಟಿಜಿಎಸ್/ಡಿಡಿ ಮೂಲಕ "ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್" ಖಾತೆ ಸಂಖ್ಯೆ – 200000807725 ಮತ್ತು ಐಎಫ್‌ಎಸ್‌ಸಿ ಕೋಡ್– ESFB0001001, ಭಾಗ್ಯಮ್ ಗ್ಯಾಲೇರಿಯಾ ಹೊಸ ಸಂಖ್ಯೆ. 18, ಬರ್ಖುಲ್ಲಾ ರಸ್ತೆ, ಟಿ–ನಗರ, ಚೆನ್ನೈ–600 117, **ದಿನಾಂಕ: 26–10–2026** ರಂದು ಅಥವಾ ಅದಕ್ಕೂ ಮೊದಲು ಯಾವುದೇ ರಾಷ್ಟ್ರೀಕೃತ ಅಥವಾ ನಿಗದಿತ ಬ್ಯಾಂಕಿನಿಂದ ಡ್ರಾ ಮಾಡಲಾಗಿದೆ.

ಇ–ಹರಾಜು ಮಾರಾಟದ ನಿಯಮಗಳು ಮತ್ತು ಷರತ್ತುಗಳ ವಿವರಗಳಿಗಾಗಿ, ದಯವಿಟ್ಟು www.Equitasbank.in ಮತ್ತು https://www.bankeauctions.com ನಲ್ಲಿ ನೀಡಿರುವ ಲಿಂಕ್ ಅನ್ನು ನೋಡಿ.

ದಿನಾಂಕ: 23.09.2026, ಸ್ಥಳ: ಶಿವಮೊಗ್ಗ
ಸಹಿ/– ಅಧಿಕೃತ ಅಧಿಕಾರಿ, ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್